ನಿಮಗೆ ಅಷ್ಟು ಸಂಶಯವಿದ್ದರೆ, ಬೇಕಾದ ವಿವರವನ್ನು ರಸೀದಿಯ ಮೇಲೆಯೇ ಬರೆದುಕೊಡುತ್ತೇನೆ."

"ಹಾಗೇನೂ ಬೇಡ. ಸುಮ್ಮನೆ ಕೇಳಿದೆ, ಅಷ್ಟೇ."

ಅವನು ಎರಡರ್ಧ ರಶೀದಿಯ ಮೇಲೆ 'ವಸ್ತು' ಎಂಬ ಜಾಗವನ್ನು ಖಾಲಿ ಬಿಟ್ಟು 'ಮೌಲ್ಯ' ಎಂಬ ಜಾಗದಲ್ಲಿ ಐವತ್ತು ಡಾಲರುಗಳೆಂದು ಬರೆದ. ರಸೀದಿಯ ಒಂದರ್ಧವನ್ನು ಹರಿದು ಮಿಸೆಸ್ ಬ್ರಿಗ್ಸಳಿಗೆ ಕೊಟ್ಟು ಮತ್ತೊಂದು ಅರ್ಧವನ್ನು ತನ್ನ ಡ್ರಾವರಿನೊಳಗೆ ಸೇರಿಸಿದ. ನಂತರ ಜೇಬಿನಿಂದ ಪರ್ಸನ್ನು ತೆರೆದು ಹತ್ತು ಡಾಲರಿನ ಐದು ನೋಟುಗಳನ್ನು ಎರಡು ಬಾರಿ ಎಣಿಸಿ ಮಿಸೆಸ್ ಬ್ರಿಗ್ಸಳ ಕೈಗೆ ಕೊಡುತ್ತಾ, "ಬಡ್ಡಿ ತಿಂಗಳಿಗೆ ಮೂರು ಪರ್ಸೆಂಟ್ ಮೇಡಂ." ಎಂದ.

"ಪರವಾ ಇಲ್ಲ. ಆದರೆ, ಕೋಟನ್ನು ಮಾತ್ರ ಜೋಪಾನವಾಗಿ ಇಡುತ್ತೀರಿ ಎಂದು ನಂಬಿರುತ್ತೇನೆ." ಮಿಸೆಸ್ ಬ್ರಿಗ್ಸ್ ಅವನ ಕಣ್ಣುಗಳಲ್ಲಿ ಕಣ್ಣನ್ನು ನೆಟ್ಟು ಗೋಗರೆಯುವ ದನಿಯಲ್ಲಿ ಹೇಳಿದಳು.

ಅವನು ತಲೆಯಲ್ಲಾಡಿಸಿದನಷ್ಟೇ, ಮಾತನಾಡಲಿಲ್ಲ.

"ಕೋಟನ್ನು ಈ ಬಾಕ್ಸಲ್ಲೇ ಹಾಕಿ ಕೊಡಲಾ?" ಆಕೆ ಕೇಳಿದಳು.

"ಬೇಡ, ಬೇಡ..." ಅವನು ಹೇಳಿದ. ಮಿಸೆಸ್ ಬ್ರಿಗ್ಸ್ ಅಲ್ಲಿಂದ ಹೊರಟಳು. ಟ್ಯಾಕ್ಸಿಯವನು ಕಾಯುತ್ತಿದ್ದ. ಮಿಸೆಸ್ ಬ್ರಿಗ್ಸ್ ಕುಳಿತುಕೊಳ್ಳುತ್ತಲೇ ಅವರು ಹತ್ತೇ ನಿಮಿಷದಲ್ಲಿ ಮನೆ ತಲುಪಿದರು.

"ಡಾ... ರ್ಲಿಂಗ್!!!" ಸಿರಿಲನನ್ನು ಕಂಡ ಕೂಡಲೇ ಮಿಸೆಸ್ ಬ್ರಿಗ್ಸ್ ದಾಪುಗಾಲಿಡುತ್ತಾ ಅವನ ತೆಕ್ಕೆಗೆ ಬಿದ್ದು ಲೊಚಲೊಚನೆ ಮುದ್ದುಗರೆದಳು. "ನನಗೆ ಗೊತ್ತಿತ್ತು... ನನ್ನ ಮಿಸ್ ಮಾಡ್ಕೊಂಡೆ ಅಲ್ಲ ಡಾರ್ಲಿಂಗ್?"

ಸಂಜೆಯ ಪತ್ರವನ್ನು ನೋಡುತ್ತಾ ಕುಳಿತ್ತಿದ್ದ ಸಿರಿಲ್ ಗಡಿಯಾರ ನೋಡಿದ. "ಇವತ್ತು ಸ್ವಲ್ಪ ತಡವಾಯ್ತು ಅಲ್ವಾ ಡಿಯರ್?"

"ಈ ದರಿದ್ರ ರೈಲುಗಳೋ... ಥೂ, ಸಾಕಾಯ್ತಪ್ಪ!... ಹಾಂ! ಅಂದ್ಹಾಗೆ ಚಿಕ್ಕಮ್ಮ ನಿನ್ನನ್ನು ತುಂಬಾ... ತುಂಬಾ ಕೇಳಿದ್ದಾರೆ ಡಾರ್ಲಿಂಗ್. ಬಾಯಾರಿ ನನ್ನ ಗಂಟಲು ಒಣಗಿ ಹೋಗಿದೆ. ನನಗೊಂದು ಡ್ರಿಂಕ್ ಬೇಕೇ ಬೇಕು. ನಿನಗೆ ಸಿರಿಲ್?"

ಸಿರಿಲ್ ಓದುತ್ತಿದ್ದ ಪೇಪರನ್ನು ಮಡಚಿಟ್ಟು ಮದ್ಯ ಜೋಡಿಸಿಟ್ಟಿದ್ದ ಬೀರುವಿನ ಬಳಿಗೆ ಹೋದ. ಜಿನ್ ಬಾಟಲನ್ನು ಹೊರತೆಗೆದು ಗ್ಲಾಸಿಗೆ ಹುಯ್ಯತೊಡಗಿದ. ಮಿಸೆಸ್ ಬ್ರಿಗ್ಸ್ ಕೋಟು, ಗ್ಲೌಸುಗಳನ್ನು ಕಳಚುತ್ತಾ ಡ್ರಿಂಕ್ಸ್ ತಯಾರು ಮಾಡುತ್ತಿದ್ದ ತನ್ನ ಗಂಡನ ಕಡೆಗೆ ನೋಡಿದಳು. ಅವನನ್ನು ಕರ್ನಲ್ ಸಾಹೇಬರ ಜೊತೆಗೆ ನಿಲ್ಲಿಸಿ ಇಬ್ಬರನ್ನೂ ಹೋಲಿಕೆ ಮಾಡತೊಡಗಿದಳು. ಕರ್ನಲ್ ಸಾಹೇಬರ ಹುರಿಗಟ್ಟಿದ್ದ ದೇಹದಾರ್ಢ್ಯದ ಮುಂದೆ ತನ್ನ ಗಂಡ ಅವಳಿಗೆ ನೀರಿನಲ್ಲಿ ಒದ್ದೆಯಾದ ಇಲಿಯಂತೆ ಕಾಣಿಸತೊಡಗಿದ. ಕರ್ನಲ್ ಸಾಹೇಬರ ಮೈಯಿಂದ ಅಪ್ಪಟ ಮಣ್ಣಿನ ವಾಸನೆ ಸೂಸುತ್ತಿದ್ದರೆ, ಸಿರಿಲ್, ತನ್ನ ಪೇಶೆಂಟ್‌ಗಳ ಮೇಲೆ ಸುವಾಸನೆ ಬೀರಲು ಪೆಪ್ಪರ್‌ಮಿಂಟುಗಳನ್ನು ಚೀಪುತ್ತಿದ್ದು ಅವನ ಶ್ವಾಸದಲ್ಲಿ ಅದೇ ವಾಸನೆ ಹೊರಹೊಮ್ಮುತ್ತಿತ್ತು. 'ಸಿರಿಲ್ ಡ್ರೆಸ್ ಮಾಡುತ್ತಿರುವ ರೀತಿಯನ್ನು ಬದಲಾಯಿಸಬೇಕು.' ಅವಳೆಂದುಕೊಂಡಳು. ಅವನಿಗೆ ಡ್ರೆಸ್ ಸೆನ್ಸೇ ಇರಲಿಲ್ಲ. ಅವನ ಸೂಟುಗಳು ಹಳೆಯ ಶೈಲಿಯದಾಗಿದ್ದವು. ಕ್ಲಿನಿಕಿಗೆ ಬರುವ ಪ್ರಾಯದ ಹೆಣ್ಣುಮಕ್ಕಳಿಗೆ ಇಂಪ್ರೆಸ್ ಮಾಡಲು ಅವನು ಆಡುತ್ತಿದ್ದ ಮಂಗಾಟಗಳನ್ನು ಕೆಲವೊಮ್ಮೆ ಕ್ಲಿನಿಕಿಗೆ ಹೋದಾಗ ಅವಳು ಗಮನಿಸಿದ್ದಳು. ಅವಳಿಗೆ ಹೊಟ್ಟೆಕಿಚ್ಚಿಗಿಂತ ಹೆಚ್ಚಾಗಿ ನಗು ಬರುತ್ತಿತ್ತು. ಅದು ಗರಿಗಳು ಉದುರಿದ ಮುದಿ ಗಂಡು ನವಿಲು ಇದ್ದ ನಾಲ್ಕು ಗರಿಗಳನ್ನೇ ಕುಣಿಸಿ ಹೆಣ್ಣು ನವಿಲನ್ನು ಆಕರ್ಷಿಸುವ ಪ್ರಯತ್ನದಂತಿರುತ್ತಿತ್ತು.

ಸಿರಿಲ್, ಒಂದು ಮಾರ್ಟಿನಿಯನ್ನು (ಜಿನ್ ಮತ್ತು ವರ್ಮೂತ್ ಎಂಬ ಸುವಾಸನೆಯುಕ್ತ ವೈನಿನ ಮಿಶ್ರಣ) ತಯಾರಿಸಿ ಅವಳೆಡೆಗೆ ಬಂದ. ಮಿಸೆಸ್ ಬ್ರಿಗ್ಸ್ ಅವಳ ಹ್ಯಾಂಡ್ ಬ್ಯಾಗನ್ನು ತೊಡೆಯ